

ತಂದೆ: ಬೇಕೂಫ್ ನೀನು ಮಮ್ಮಿಗಿಂತ ಏರಿದ ಧ್ವನಿಯಲ್ಲಿ ಮಾತನಾಡುತ್ತೀಯಾ?
ಮಗ: ಏಕೆ ನಿಮಗೆ ಮತ್ಸರವಾಗುತ್ತಿದೆಯೇ?
ತಂದೆ: ನೀನು ದೊಡ್ಡ ಧ್ವನಿಯಲ್ಲಿ ಮಾತನಾಡಿದರೆ ನನಗೇಕೆ ಮತ್ಸರವಾಗುತ್ತದೆ.
ಮಗ: ಏಕೆಂದರೆ ನಿಮಗೆ ಮಮ್ಮಿಯ ಎದುರು ಏರಿದ ಧ್ವನಿಯಲ್ಲಿ ಮಾತನಾಡಲು ಆಗುವುದಿಲ್ಲವಲ್ಲ.

★★★

ಅಜ್ಜಿ: ನಿನ್ನ ಮದುವೆ ನಿಶ್ಚಿತವಾಗಿದೆ. ಈಗಲಾದರೂ ಅಡುಗೆ ಮಾಡುವುದನ್ನು ಕಲಿತುಕೋ.
ಮೊಮ್ಮಗಳು: ಮದುವೆ ನಿಶ್ಚಿತಯವಾದರೆ ಅಡುಗೆ ಮಾಡುವುದನ್ನು ಏಕೆ ಕಲಿಯಬೇಕು?
ಅಜ್ಜಿ: ನಿನ್ನ ಗಂಡ ಮನೆಯಲ್ಲಿ ಇಲ್ಲದಿದ್ದಾಗ ನೀನು ಉಪವಾಸ ಇರುತ್ತೀಯಾ?

★★★

ಅತ್ತೆ: ನಿನಗೆಷ್ಟು ಬಾರಿ ಹೇಳಿದೆ. ಹೊರಗೆ ಹೋದಾಗ ಕುಂಕುಮ ಇಟ್ಕೊಂಡು ಹೋಗು ಅಂತ.
ಸೊಸೆ: ಜೀನ್ಸ್ ಹಾಗೂ ಟಾಪ್ ಮೇಲೆ ಯಾರೂ ಕುಂಕುಮ ಇಡುತ್ತಾರೆ ಅತ್ತೆ?
ಅತ್ತೆ: ನಾನು ಹೇಳಿದ್ದು ಹಣೆಯ ಮೇಲೆ ಕುಂಕುಮವಿಡು ಅಂತ. ನಿನ್ನ ಜೀನ್ಸ್ ಹಾಗೂ ಟಾಪ್ ಮೇಲೆ ಅಲ್ಲ!

★★★

ಸೀಮಾ: ನಾನು ನನ್ನ ಗಂಡ ಇಂದಿನಿಂದ ತಮಿಳು ಕಲಿಯಬೇಕೆಂದು ನಿರ್ಧರಿಸಿದ್ದೇವೆ.
ಗೆಳತಿ: ಹಠಾತ್ತನೆ ಈ ನಿರ್ಧಾರವೇಕೆ?



ಸೀಮಾ: ನಾವು ಒಂದು ತಮಿಳು ಮಗುವನ್ನು ದತ್ತು ಪಡೆದಿದ್ದೇವೆ. ಅದು ಮಾತನಾಡಲು ಆರಂಭಿಸುವ ವೇಳೆಗೆ ನಾವು ತಮಿಳು ಕಲಿತಿರಬೇಕಲ್ಲ!

★★★




ಶಾಲೆಯೊಂದಕ್ಕೆ ಬೆಂಕಿ ಹೊತ್ತಿಕೊಂಡು ಅದು ಸಂಪೂರ್ಣವಾಗಿ ಸುಟ್ಟು ಹೋಯಿತು. ಹೀಗಾಗಿ ಶಾಲೆಗೆ ರಜೆ ನೀಡಲಾಯಿತು. 'ಶಾಲೆ ಸುಟ್ಟು ಹೋಗಿದೆ ನಾಳೆಯಿಂದ ಶಾಲೆಗೆ ಬರಬೇಕಾಗಿಲ್ಲ' ಅಂತ ಮಕ್ಕಳೆಲ್ಲ ಸಂತೋಷದಿಂದ ಕುಣಿದು ಕುಪ್ಪಳಿಸುತ್ತಾ ಮನೆಯತ್ತ ಸಾಗಿದರು. ಆದರೆ, ಬಾಲಕನೊಬ್ಬ ದುಃಖಿತನಾಗಿ ಶಾಲೆಯಿಂದ ಮನೆಯ ಕಡೆಗೆ ಹೊರಟ. ಅವನನ್ನು ತಡೆದ ಮಹಿಳೆಯೊಬ್ಬಳು, 'ಮಕ್ಕಳೆಲ್ಲ ಸಂತೋಷದಿಂದ ಮನೆಗೆ ಹೋಗುತ್ತಿದ್ದರೆ ನೀನೊಬ್ಬನೆ ಯಾಕೆ ದುಃಖಿತನಾಗಿ ಹೋಗುತ್ತಿರುವೆ' ಎಂದು ಕೇಳಿದಳು. ಪ್ರತಿಯಾಗಿ ಬಾಲಕ, 'ಅಯ್ಯೋ ಸುಮ್ಮನಿರಮ್ಮ. ಶಾಲೆಗೇನೊ ಬೆಂಕಿ ಬಿದ್ದು ಸುಟ್ಟು ಹೋಯಿತು. ಆದರೆ, ಶಿಕ್ಷಕ–ಶಿಕ್ಷಕಿಯರೆಲ್ಲ ಇನ್ನೂ ಜೀವಂತವಾಗಿದ್ದಾರಲ್ಲ. ನಾಳೆ ನಮ್ಮನ್ನ ಪಾರ್ಕ್‌ನಲ್ಲಿ ಕೂರಿಸಿ ಪಾಠ ಮಾಡುತ್ತಾರೆ' ಅಂದ.

- ಮದುವೆ ಬಳಿಕ ಪತ್ನಿಗೆ ಪ್ರೀತಿ ವ್ಯಕ್ತಪಡಿಸುವ ಸಾಮಾನ್ಯ ವಿಧಾನವೆಂದರೆ ಅದು 'ಐ ಲವ್ ಯು'. ಆದರೆ ಅದಕ್ಕೂ ಪ್ರಭಾವಶಾಲಿ ವಿಧಾನವೆಂದರೆ ಅದು 'ಪ್ರಿಯೆ, ಇವತ್ತು ಪಾತ್ರೆಗಳನ್ನು ನಾನು ತೊಳೆಯುತ್ತೇನೆ' ಎನ್ನುವುದು.

- ಆತ್ಮಹತ್ಯೆಯಲ್ಲಿ ಎರಡು ವಿಧಾನಗಳಿವೆ. ಒಂದು ಕೊರಳಿಗೆ ನೇಣು ಹಾಕಿಕೊಂಡು ನೇತಾಡುವುದು. ಮತ್ತೊಂದು ಅದೇ ಕೊರಳಿಗೆ ವರಮಾಲೆ ಹಾಕಿಕೊಂಡು ಜೀವನದುದ್ದಕ್ಕೂ ನೇತಾಡುತ್ತಾ ಇರುವುದು!

- ಪತ್ನಿ ಪತಿಗೆ ಹೀಗೆ ಹೇಳಿದಳು. ರೀ ಇವತ್ತು ನಾವು ಕಣ್ಣಾ ಮುಚ್ಚಾಲೆ ಆಟ ಆಡೋಣ. ನಾನು ಅಡಗಿಕೊಳ್ಳುತ್ತೇನೆ, ನೀವು ನನ್ನನು ಹುಡುಕಬೇಕು. ಒಂದು ವೇಳೆ ನೀವು ನನ್ನನ್ನು ಹುಡುಕಿದರೆ ನಾವು ಶಾಪಿಂಗ್‌ಗೆ ಹೋಗೋಣ. ಪತ್ನಿ ಹೀಗೆಂದ ಬಳಿಕ ಪತಿ ಐದು ದಿನಗಳಿಂದ ನಾಪತ್ತೆ. ಅವನಿಗಾಗಿ ಪತ್ನಿ ಇನ್ನೂ ಹುಡುಕುತ್ತಿದ್ದಾಳೆ!

(ಸಂಗ್ರಹ) **ಮುರಲೀಧರ ಕುಲಕರ್ಣಿ,**
ಬೀದರ್

